ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, ದಿನಾಂಕ: 16ನೇ ಮಾರ್ಚ್, 2020

ನಿರುದ್ಯೋಗ ಪದವೀಧರರು ಮತ್ತು ಶಿಕ್ಷಣ ನೀತಿ

ಶ್ರೀ ಎಂ.ಸಿ.ವೇಣುಗೋಪಾಲ್ (ವಿಧಾನ ಸಭೆಯಿಂದ ಚುನಾಯಿತರಾದವರು) :-

1014 (1168) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಪ್ರತಿ ವರ್ಷ ಎಷ್ಟು ಪದವೀಧರರು ಪದವಿಯನ್ನು ಮುಗಿಸಿ ಹೊರಬರುತ್ತಿದ್ದಾರೆ, (ಇಂಜಿನಿಯರಿಂಗ್, ಮೆಡಿಕಲ್, ಕಾನೂ ಮುಂತಾದ ಎಲ್ಲಾ ರೀತಿಯ ಪದವಿ ಸೇರಿದಂತೆ ವಿಭಾಗವಾರು ಎಲ್ಲಾ ಪದವೀಧರರುಗಳ ಅಂಕಿ ಅಂಶ ಒದಗಿಸುವುದು)

(ಆ) ಉತ್ತೀರ್ಣರಾಗಿ ಹೊರಬರುತ್ತಿರುವ ಈ ಪದವೀಧರರುಗಳಿಗೆ ಉದ್ಯೋಗ ಕಲ್ಪಿಸಲಾಗುತ್ತಿದೆಯೇ; ಇಲ್ಲವಾದಲ್ಲಿ ಪದವಿ ಮುಗಿಸಿ ಹೊರ ಬಂದಿರುವ ಎಷ್ಟು ಪದವೀಧರರು ನಿರುದ್ಯೋಗಿಗಳಾಗಿದ್ದಾರೆ; ಇದಕ್ಕೆ ಕಾರಣಗಳೇನು; ಮಾನವ ಸಂಪನ್ಮೂಲಗಳ ಬಳಕೆ ಹೇಗೆ ಬಳಸಿಕೊಳ್ಳಲು ಚಿಂತಿಸಲಾಗಿದೆ;

(ಇ) ಪದವಿ ಮುಗಿಸಿ ಹೊರ ಬರುವ ಪ್ರತಿಯೊಬ್ಬ ಪದವೀಧರರು ತಕ್ಷಣ ಉದ್ಯೋಗ ಪಡೆಯುವಂತಾಗಲು ಎಲ್ಲ ಪದವಿ ಕೋರ್ಸ್‌ಗಳಲ್ಲಿ ಅಗತ್ಯತೆ ಮತ್ತು ಬೇಡಿಕೆಗೆ ಅನುಗುಣವಾಗಿ ಪದವೀಧರರನ್ನು ಸೃಷ್ಠಿಸುವ ಬಗ್ಗೆ ಸರ್ಕಾರ ಚಿಂತಿಸುವುದೇ;

(ಈ) ನಿರುದ್ಯೋಗಿಯಾಗಿ ಖಾಲಿ ಇರುವ ಈ ಎಲ್ಲಾ ನಿರುದ್ಯೋಗಿಗಳಿಗೆ ಗೌರವ ವೇತನ ನೀಡಿ ರಾಜ್ಯದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಇವರ ಸೇವೆಯನ್ನು ಬಳಸಲು ಸರ್ಕಾರ ಚಿಂತಿಸುವುದೇ;

(ಉ) ಈಗಿರುವ ಬೇಡಿಕೆಗೆ ಅನುಗುಣವಾಗಿ ಉದ್ಯೋಗಿಗಳನ್ನು ಸೃಷ್ಟಿಸಲು ಬೇಡಿಕೆ ಇಲ್ಲದ ಪದವಿಗಳನ್ನು ತೆಗೆದು ಬೇಡಿಕೆ ಇರುವ ಹೊಸ ಕೋರ್ಸ್‌ಗಳನ್ನು ಪರಿಚಯಿಸುವ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಕ್ರಾಂತಿಯನ್ನು ತರಲಾಗುವುದೆ ?